# 18

# “ದೇವರ ಕ್ರಿಯೆಗಳು ಇವನಲ್ಲಿ ಕಂಡುಬರುವದಕ್ಕೆ ಇದಾಯಿತು”

# (9:1-5)

ಜೀವನವು ಒಂದು ಆಕಸ್ಮಿಕ ಘಟನೆಯೋ, ಒಂದು ಅನೀಕ್ಷಿತ ಘಟನೆಯ ದೊಡ್ಡ ಆಟವೋ? ನಮ್ಮ ಜೀವಿತಗಳಲ್ಲಿ ಯಾಕೆ ಘಟನೆಗಳು ಸಂಭವಿಸುತ್ತವೆ ಎಂಬ ಪ್ರಶ್ನೆಯು ಪುನಃ ಪುನಃ ಕೇಳಲ್ಪಡುತ್ತದೆ. ಅದು ಅತ್ಯುತ್ತಮ ಚಲನ ಚಿತ್ರಗಳ ಮತ್ತು ಸಾಹಿತ್ಯದ ಮುಖ್ಯ ಪ್ರಸ್ತಾಪವಾಗಿದೆ, ಹಾಗೂ ಅನುದಿನವೂ ನಿಜವಾದ ಜನರಿಂದ, ವಿಶೇಷವಾಗಿ ದುಃಖದ ಮತ್ತು ಹಾನಿಯ ಕ್ಷಣಗಳಲ್ಲಿ ಅದು ಕೇಳಲ್ಪಟ್ಟಿದೆ. ನಮ್ಮ ಮೂಲ ಪಾಠ, 9:1-5ರಲ್ಲಿ “ಯಾಕೆ?” ಎಂಬ ಪ್ರಶ್ನೆಯನ್ನು ಸಂಬೋಧಿಸುವ ಅದ್ವಿತೀಯ ಮಾರ್ಗವನ್ನು ಯೇಸುವು ಒದಗಿಸಿದ್ದಾನೆ.

## ಪ್ರಶ್ನೆ (9:1, 2)

ಒಂದು ದಿನ ಯೇಸುವು ತನ್ನ ಶಿಷ್ಯರೊಂದಿಗೆ ಯೆರೂಸಲೇಮಿನಲ್ಲಿ ದೇವಾಲಯದ ಸಮೀಪದಲ್ಲಿ ನಡೆದಾಡುತ್ತಿದ್ದನು, ಆಗ ಹಾದು ಹೋಗುತ್ತಿರುವಾಗ ಒಬ್ಬ ಹುಟ್ಟು ಕುರುಡನನ್ನು ನೋಡಿದನು (9:1). ಅವನು ಒಬ್ಬ ಸಾಂಕೇತಿಕ ಭಿಕ್ಷುಕನಾಗಿದ್ದರೆ, ಅವನು ಕೊಳೆಯಾದವನಾಗಿರುತ್ತಿದ್ದನು, ಅವನ ಬಟ್ಟೆಗಳು ಹರಿದು ಹೋಗಿರುತ್ತಿದ್ದವು, ಮತ್ತು ಅವನು ಅತೀಯಾದ ನಿರಾಶೆಯಲ್ಲಿ ಜೀವಿಸುತ್ತಿದ್ದನು. ಯೇಸು ಮತ್ತು ಆತನ ಶಿಷ್ಯರು ಯೆರೂಸಲೇಮಿನಲ್ಲಿದ್ದಾಗ ಪ್ರತಿದಿನವೂ ಭಿಕ್ಷುಕರನ್ನು ನೋಡುತ್ತಿದ್ದರು; ಆದರೆ ಕೆಲವೊಂದು ಕಾರಣದಿಂದ, ಹುಟ್ಟಿದಂದಿನಿಂದ ಕುರುಡನಾಗಿದ್ದ ಈ ಮನುಷ್ಯನ ನೋಟವು ಆ ದಿನ ಯೇಸುವಿಗೆ ಪ್ರಶ್ನೆ ಕೇಳಲು ಶಿಷ್ಯರಿಗೆ ಕಾರಣವಾಯಿತು.

ಈ ಭಿಕ್ಷುಕನು ಕುರುಡನಾಗಿ ಯಾಕೆ ಹುಟ್ಟಿದ್ದಾನೆಂದು ಯೇಸುವು ಯೋಚಿಸುತ್ತಾನೆ ಎಂಬುದನ್ನು ತಿಳಿಯಲು ಅವರು ಬಯಸಿದ್ದರು (9:2). ಅದು ಆ ಮನುಷ್ಯನ ಪಾಪದಿಂದಲೋ ಇಲ್ಲವೇ ಅವನ ತಂದೆ ತಾಯಿಗಳ ಪಾಪಗಳ ಕಾರಣದಿಂದಲೋ? ಅವರ ಮನಸ್ಸಿನಲ್ಲಿ ಶ್ರಮೆಯು ಯಾವಾಗಲೂ ಪಾಪದ ಕಾರಣದಿಂದಾಗುವುದೆಂಬುದಾಗಿತ್ತು. ಅದರ ಪರಿಣಾಮವಾಗಿ, ಯಾರೋ ಒಬ್ಬರ ಪಾಪಗಳು ಆ ಮನುಷ್ಯನ ಕುರುಡುತನಕ್ಕೆ ಕಾರಣವಾಗಿರಬಹುದು. ಅದು ಆ ಮನುಷ್ಯನ ಪಾಪಗಳಾಗಿರಬಹುದೋ? ಹಾಗಿದ್ದರೆ, ಅವನು ಕುರುಡನಾಗಿ ಯಾಕೆ ಹುಟ್ಟಿದ್ದಾನೆ? ನಿಶ್ಚಯವಾಗಿಯೂ, ಆಗಲೇ ಹುಟ್ಟಿದ ಮಗುವು ಕುರುಡುತನಕ್ಕೆ ಕಾರಣವಾಗುವ ಪಾಪದ ಅಪರಾಧಿಯಾಗಿರಲಾರದು, ಆ ಮನುಷ್ಯನ ತಂದೆ ತಾಯಿಗಳು ಪಾಪಮಾಡಿದ ಕಾರಣವಿರಬಹುದೋ? ಬಹುಶಃ, ತಂದೆತಾಯಿಗಳ ಪಾಪವಾಗಿದ್ದರೆ, ಆಗ ಮಗನು ಯಾಕೆ ಶ್ರಮೆ ತಾಳುವವನಾಗಿರಬೇಕು?

ಶಿಷ್ಯರ ಪ್ರಶ್ನೆಯು ಪಾಪವು ಶ್ರಮೆಗೆ ಕಾರಣವಾಗುತ್ತದೆ ಎಂಬ ಅವರ ನಂಬಿಕೆಯಲ್ಲಿ ಬೇರೂರಿತ್ತು. ಪಾಪ - ಮತ್ತು - ಶ್ರಮೆಯ ಮಧ್ಯದಲ್ಲಿ ಕಾರಣ ಮತ್ತು ಪರಿಣಾಮದ ಸಂಬಂಧವಿರುತ್ತದೆ. ಹಿಂದಿನ ಕಾಲದಲ್ಲಿ ಈ ದೃಷ್ಟಿ ಕೋನವು ಸಾಮಾನ್ಯವಾಗಿತ್ತು ಯೋಬನು ತನ್ನ ಮಕ್ಕಳನ್ನು, ತನ್ನ ಆಸ್ತಿಯನ್ನು ಮತ್ತು ತನ್ನ ಆರೋಗ್ಯವನ್ನು ಕಳೆದು

ಕೊಂಡಾಗ ಅವನ ಬಳಿಗೆ ಬಂದು ದುಃಖಪಟ್ಟ ಯೋಬನ ಸ್ನೇಹಿತರಲ್ಲಿ ಒಬ್ಬನು ಯೋಬನಿಗೆ ಹೀಗೆ ಹೇಳಿದನು,

> ನೀನೇ ಆಲೋಚನೆ ಮಾಡು, ನಿರಪರಾಧಿಯು ಎಂದಾದರೂ ನಾಶವಾದದ್ದುಂಟೇ, ಯಥಾರ್ಥರು ಅಳಿದು ಹೊದದ್ದೆಲ್ಲಿ?
> ನಾನು ನೋಡಿರುವ ಮಟ್ಟಿಗೆ ಅಧರ್ಮವನ್ನು ಉತ್ತು ಕೇಡನ್ನು ಬಿತ್ತುವವರು ಕೇಡನ್ನೇ ಕೊಯ್ಯುವರು
> ದೇವರ ಶ್ವಾಸದಿಂದ ನಾಶವಾಗುತ್ತಾರೆ. ಆತನ ಸಿಟ್ಟೆಂಬ ಗಾಳಿಯಿಂದ ಹಾಳಾಗುತ್ತಾರೆ.
> ಸಿಂಹಗರ್ಜನೆಯೂ ಆರ್ಭಟಿಸುವ ಸಿಂಹದ ಧ್ವನಿಯೂ [ಅಡಗಿ] ಪ್ರಾಯದ ಸಿಂಹಗಳ ಕೋರೆಗಳು ಮುರಿಯಲ್ಪಡುವವು,
> ಮೃಗೇಂದ್ರನು ಆಹಾರವಿಲ್ಲದೆ ಸತ್ತು ಸಿಂಹದ ಮರಿಗಳು ಚದರಿ ಹೋಗುವವು (ಯೋಬ 4:7-11).

"ಪಿಲಾತನು ಗಲಿಲಾಯದವರ ರಕ್ತವನ್ನು ಅವರು ಕೊಟ್ಟ ಬಲಿಗಳ ಸಂಗಡ ಬೆರಸಿದನು" (ಲೂಕ 13:1) ಎಂಬುದರ ಬಗ್ಗೆ ಕೆಲವರು ಯೇಸುವನ್ನು ಕೇಳಿದಾಗ ಶ್ರಮೆಯ ಇಂಥದೇ ದೃಷ್ಟಿಕೋನವು ವ್ಯಕ್ತಪಡಿಸಲ್ಪಟ್ಟಿತು. ಗಲಿಲಾಯದವರ ಸಾಮೂಹಿಕ ಸಂಹಾರದ ಬಗ್ಗೆ ಯೇಸುವು ಏನೆಂದು ಯೋಚಿಸಿದನೆಂದು ಕೇಳಲು ಅವರು ಬಯಸಿದ್ದರು. ಪ್ರಶ್ನಿಸುವವರ ಉದ್ದೇಶಗಳು ಏನೇ ಆಗಿದ್ದರೂ, ಯೇಸುವು ಪ್ರಶ್ನೆಯನ್ನು ಶ್ರಮೆಪಡುವದಕ್ಕೆ ಮತ್ತು ಪಾಪಕ್ಕೆ ಕಾರಣ - ಮತ್ತು - ಪರಿಣಾಮದ ಸಂಬಂಧವು ಯಾವಾಗಲೂ ಇರುವದಿಲ್ಲ ಎಂದು ಬೋಧಿಸಲು ಉಪಯೋಗಿಸಿದನು; ನಿರ್ದಿಷ್ಟವಾದ ಶ್ರಮೆಯು ಯಾವಾಗಲೂ ನಿರ್ದಿಷ್ಟವಾದ ಪಾಪದಲ್ಲಿ ಬೇರೂರಿರುವದಿಲ್ಲ. ಇದೇ ಪ್ರಶ್ನೆಯ ವಿಷಯವನ್ನು ಎಬ್ಬಿಸಿದ ಇನ್ನೊಂದು ಘಟನೆಯನ್ನು ಹೇಳಿದನು. ಸಿಲೊವಾಮಿನ ಬುರುಜು ಬಿದ್ದಾಗ ಸತ್ತು ಹೋದ ಹದಿನೆಂಟು ಜನರ ಬಗ್ಗೆ ಜ್ಞಾಪಕಕ್ಕೆ ತಂದನು. ಅವರ ಮರಣಗಳಿಗೆ ಅವರ ಪಾಪವು ಕಾರಣವಾಗಿತ್ತೋ? ಆಗ ಯೇಸುವು ತನ್ನ ಸ್ವಂತ ಪ್ರಶ್ನೆಗೆ ಉತ್ತರ ಕೊಟ್ಟನು: "ಹಾಗಲ್ಲವೆಂದು ನಿಮಗೆ ಹೇಳುತ್ತೇನೆ. ದೇವರ ಕಡೆಗೆ ತಿರುಗಿಕೊಳ್ಳದಿದ್ದರೆ ನೀವೆಲ್ಲರೂ ಅವರಂತೆ ಹಾಳಾಗಿ ಹೋಗುವಿರಿ" (ಲೂಕ 13:5).

ವರ್ಷಗಳಲೆಲ್ಲಾ, ಯೆಹೂದಿ ರಬ್ಬಿಗಳು ಈ ಪ್ರಶ್ನೆಯನ್ನು ತಾವೇ ಚರ್ಚಿಸಿದ್ದರು. ರಬ್ಬಿ ಅಮ್ಮಿ ಎಂಬುವನು, "ಪಾಪವಿಲ್ಲದೇ ಮರಣವಿಲ್ಲ, ಮತ್ತು ಅಪರಾಧವಿಲ್ಲದೇ ಶ್ರಮೆಯಿರುವದಿಲ್ಲ"[1] ಎಂದು ಹೇಳಿದನು. ಸಹಜವಾಗಿ ಅವನೂ ಸಹ, ಶ್ರಮೆಯು ಪಾಪದಿಂದ ವಿವರಿಸಲ್ಪಡಬಹುದು ಎಂದು ನಂಬಿದನು.

ಮೊದಲಿಗೆ ಈ ದೃಷ್ಟಿಕೋನವು ವಿಚಿತ್ರವಾದದ್ದೂ ನಮಗೆ ಪರಿಚಿತಿಯಿಲ್ಲದ್ದೂ ಆಗಿ ಕಾಣಬಹುದು, ಆದರೆ ಪರೀಕ್ಷಿಸಿದ ನಂತರ ನಾವು ಗ್ರಹಿಸುವುದಕ್ಕಿಂತ ಹೆಚ್ಚಾಗಿ ನಮ್ಮ ನಂಬಿಕೆಗಳು ಶಿಷ್ಯರ ನಂಬಿಕೆಗಳಿಗೆ ಸಮೀಪವಾಗಿರುವವು ಎಂದು ಕಂಡುಕೊಳುತ್ತೇವೆ. ಮರಣಾಂತಿಕ ರೋಗಗಳಿಂದ ಇಲ್ಲವೇ ದುಃಖಕರವಾದ ಅಪಘಾತಗಳಿಂದ ಚಿಕ್ಕ ಮಕ್ಕಳನ್ನು ಕಳೆದು ಕೊಂಡ ತಂದೆ ತಾಯಿಗಳೊಂದಿಗೆ ನನ್ನ ಪರಿಚಯವಿದೆ. ಪ್ರಾರಂಭದ ಆಘಾತದ ನಂತರ, ಅವರೆಲ್ಲರೂ ತಮ್ಮ ಮಕ್ಕಳಿಗೆ ಅಂಥಹ ದುಃಖಾತಗಳು ಬರಲು ಕಾರಣವೇನು ಎಂಬುದನ್ನು ಕಂಡುಕೊಳ್ಳಲು ಪ್ರಯತ್ನಿಸುವಲ್ಲಿ ಬಹಳಷ್ಟು ಸಮಯ ಕಳೆದಿದ್ದಾರೆ. ಅದಕ್ಕೆ ತಮ್ಮ ಯೌವ್ವನದ ಪಾಪವಾಗಿರಬಹುದೆಂದು ಕೆಲವರು ಯೋಚಿಸಿದರು. ತಮಗೆ ತಿಳಿಯದ ರೀತಿಯಲ್ಲಿ ಕೆಲವೊಂದು ಭಯಂಕರವಾದ ರೀತಿಯಲ್ಲಿ ದೇವರಿಗೆ ವಿರುದ್ಧವಾಗಿ ಅವರು ಪಾಪಮಾಡಿರ ಬಹುದು. ಕೆಲವು ಜನ ತಂದೆತಾಯಿಗಳು ಇಂಥ ಪರಿಸ್ಥಿತಿಗಳಲ್ಲಿ ಈ ವಿಚಾರಗಳಿಂದ ವರ್ಷಗಳವರೆಗೆ ಚಿಂತಿಸಿದ್ದಾರೆ. ಹುಟ್ಟು ಕುರುಡನ ಬಗೆಗಿನ ಶಿಷ್ಯರ ಪ್ರಶ್ನೆಯು

ನಮಗೆ ಅಪರಿಚಿತವಾದದ್ದಾಗಿ ಕಾಣಿಸುವದಿಲ್ಲ!

ನಾವು ನಾಶನಕರವಾದ ದುಷ್ಟ ಸಂಗತಿಗಳನ್ನು ಎದುರಿಸದಿದ್ದರೂ, ಕೆಲವು ಸಲ ನಮ್ಮ ಭಾಷೆಯು ಪಾಪ ಮತ್ತು ಶ್ರಮೆಯ ಬಗ್ಗೆ ಕಾರಣ - ಮತ್ತು - ಪರಿಣಾಮದ ನಂಬಿಕೆಗೆ ಅಂಟಿಕೊಂಡಿದ್ದೇವೆ ಎಂದು ಅಲ್ಲಗಳೆಯುತ್ತದೆ. ನಾವು ಕಷ್ಟಗಳನ್ನು ಇಲ್ಲವೆ ತೊಂದರೆಗಳನ್ನು ಅನುಭವಿಸುವಾಗ, ಕೆಲವು ಸಲ "ಇದಕ್ಕೆ *ಅರ್ಹನಾಗಲು* ನಾನು ಏನನ್ನು ಮಾಡಿದ್ದೇನೆ?" ಎಂದು ಕೇಳುವದಿಲ್ಲವೋ: ನಮಗೆ ಯಾವುದಾದರೂ ಅಹಿತಕರವಾದದ್ದು ಸಂಭವಿಸುವಾಗ, "ಅದು ಸರಿಯಾದದ್ದಾಗಿರುವದಿಲ್ಲ!" ಎಂದು ನಾವು ಕೂಗುವ ಪ್ರತಿಯೊಂದು ಸಮಯದಲ್ಲಿ ಅದೇ ವಿಚಾರಿಸುವಿಕೆಯು ಮುಂದುವರಿಯಲ್ಪಟ್ಟಿರುತ್ತದೆ. ಜೀವನದಲ್ಲಿ ಪ್ರತಿಯೊಂದು ಚೆನ್ನಾಗಿರಬೇಕೆಂದು ನಾವು ನಿರೀಕ್ಷಿಸುತ್ತೇವೆಯೋ? ಆನಂದವಾಗಿರುವುದು ಯಾವಾಗಲೂ ಒಳ್ಳೆಯ ನಡತೆಯ ಪರಿಣಾಮವಾಗಿರುತ್ತದೆ ಮತ್ತು ನೋವು ಯಾವಾಗಲೂ ಪಾಪದ ಪ್ರತಿಫಲವಾಗಿದೆಯೆಂದು ನಾವು ನಂಬುತ್ತೇವೆಯೋ?

ಕೆಲವು ಸಲ ನಾವೆಲ್ಲರೂ ಶಿಷ್ಯರ ಪ್ರಾರ್ಥನೆಯನ್ನು ಕೇಳುತ್ತೇವೆ, ಶ್ರಮೆಯನ್ನು ಎದುರಿಸುವಾಗ, ಅದು ನಮ್ಮದಾಗಿರಲಿ ಇಲ್ಲವೇ ಬೇರೆಯವರದಾಗಿರಲಿ, ಅದು ಯಾಕೆ ಸಂಭವಿಸುತ್ತಲಿದೆ ಎಂಬುದನ್ನು ತಿಳಿಯಲು ಬಯಸುತ್ತೇವೆ. "ಯಾಕೆ?" ಎಂಬ ಪ್ರಶ್ನೆಯು ಪರಿಶುದ್ಧ ಬರಹಗಳಲ್ಲಿ ಸಂಪೂರ್ಣವಾಗಿ ಉತ್ತರಿಸಲ್ಪಟ್ಟಿರುವದಿಲ್ಲ. ಅದು ಅನೇಕ ಸಲ ಕೇಳಲ್ಪಟ್ಟಿದ್ದರೂ, ಯಾರೂ ಸಂಪೂರ್ಣವಾದ ವಿವರಣೆಯನ್ನು ಕೊಟ್ಟಿರುವದಿಲ್ಲ. ಯೋಬನು ಅದನ್ನು ಕೇಳಿದನು, ಮತ್ತು ಮಾನವನಿಗೆ ಗ್ರಹಿಸಿಕೊಳ್ಳಲು ಅವನ ಸಾಮರ್ಥ್ಯವನ್ನು ಮೀರಿ ಉತ್ತರವಿರುವುದು ಎಂದು ಹೇಳುವದರಿಂದ ದೇವರು ಪ್ರತ್ಯುತ್ತರ ಕೊಟ್ಟನು (ಯೋಬ 40; 41). "ಕಿವಿಯಿಂದ ನಿನ್ನ ವಿಷಯವನ್ನು ಕೇಳಿದ್ದೆನು; ಈಗಲಾದರೋ ನಿನ್ನನ್ನೆ ಕಣ್ಣಾರೆ ಕಂಡೆನು. ಆದ ಕಾರಣ [ನಾನು ಆಡಿದ್ದನ್ನು] ತಿರಸ್ಕರಿಸಿ ಧೂಳಿಯಲ್ಲಿಯೂ ಬೂದಿಯಲ್ಲಿಯೂ ಕುಳಿತು ಪಶ್ಚಾತ್ತಾಪಪಡುತ್ತೇನೆ" (ಯೋಬ 42:5, 6). ಹಬಕ್ಕೂಕನು ಕೇಳಿದನು, ಆದರೆ ಅವನಿಗೆ ಎಂದೂ ಉತ್ತರವು ಕೊಡಲ್ಪಡಲಿಲ್ಲ. ಅಂತ್ಯದಲ್ಲಿ ಅವನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳದಿದ್ದರೂ ಕರ್ತನನ್ನು ನಂಬಲು ತೀರ್ಮಾನಿಸಿಕೊಂಡನು:

> ಆಹಾ, ಅಂಜೂರವು ಚಿಗುರದಿದ್ದರೂ
> ದ್ರಾಕ್ಷಾಲತೆಗಳಲ್ಲಿ ಹಣ್ಣು ಸಿಕ್ಕದಿದ್ದರೂ
> ಎಣ್ಣೆ ಮರಗಳ ಉತ್ಪತ್ತಿಯು ಶೂನ್ಯವಾದರೂ
> ಹೊಲಗದ್ದೆಗಳು ಆಹಾರವನ್ನು ಕೊಡದೆಹೋದರೂ
> ಹಿಂಡು ಹಟ್ಟಿಯೊಳಗಿಂದ ನಾಶವಾದರೂ
> ಮಂದೆಯು ಕೊಟ್ಟಿಗೆಗಳೊಳಗೆ ಇಲ್ಲದಿದ್ದರೂ
> ನಾನು ಯೆಹೋವನಲ್ಲಿ ಉಲ್ಲಾಸಿಸುವೆನು,
> ನನ್ನ ರಕ್ಷಕನಾದ ದೇವರಲ್ಲಿ ಆನಂದಿಸುವೆನು.
> ಕರ್ತನಾದ ಯೆಹೋವನೇ ನನ್ನ ಬಲ;
> ಆತನು ನನ್ನ ಕಾಲನ್ನು ಜಿಂಕೆಯ ಕಾಲಿನಂತೆ ಚುರುಕುಮಾಡಿ
> ನನ್ನ ಉನ್ನತ ಪ್ರದೇಶಗಳಲ್ಲಿ ನನ್ನನ್ನು ನಡಿಸುತ್ತಾನೆ (ಹಬಕ್ಕೂಕ 3:17-19).

ಈ ಜನರು ಯಾಕೆ? ಎಂಬ ಪ್ರಶ್ನೆಗೆ ಸಂಪೂರ್ಣವಾದ ಉತ್ತರವನ್ನು ಪಡೆಯಲಿಲ್ಲ, ಮತ್ತು ಯೋಹಾನ 9ರಲ್ಲಿ ಯೇಸುವಿನ ಶಿಷ್ಯರೂ ಸಹ ಉತ್ತರವನ್ನು ಪಡೆಯಲಿಲ್ಲ!

## ಉತ್ತರ (9:3)

ಯಾಕೆ ಭಿಕ್ಷುಕನು ಕುರುಡನಾಗಿ ಹುಟ್ಟಿದ್ದಾನೆ ಎಂದು ಕೇಳಲ್ಪಟ್ಟಾಗ, ಯೇಸುವು ಉತ್ತರ

ಕೊಟ್ಟನು, "ಇವನೂ ಪಾಪಮಾಡಲಿಲ್ಲ; ಇವನ ತಂದೆ ತಾಯಿಗಳೂ ಪಾಪಮಾಡಲಿಲ್ಲ, ದೇವರ ಕ್ರಿಯೆಗಳು ಇವನಲ್ಲಿ ತೋರಿಬರುವುದಕ್ಕೆ ಇದಾಯಿತು" (9:3). ಮಾನವ ಶ್ರಮೆಯ ಕಾರಣದ ಬಗ್ಗೆ ಯೇಸುವು ಕೇಳಲ್ಪಟ್ಟನು. ಆ ನಿರ್ದಿಷ್ಟವಾದ ಪ್ರಶ್ನೆಗೆ ಉತ್ತರ ಕೊಡುವದನ್ನು ಯೇಸುವು ನಿರಾಕರಿಸಿದನು. ಈ ವಿಷಯದ ಮೇಲೆ ದೇವರು ನಮಗೆ ಹೇಳುವಂಥದ್ದನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲು ನಾವು ಅಸಮರ್ಥರು ಆಗಿದ್ದೇವೆಂಬುದು ಇದಕ್ಕೆ ಕಾರಣವಾಗಿರ ಬಹುದು. ಕಾರಣವು ಏನೇ ಇದ್ದರೂ, ಯೇಸುವು ಮಾನವ ಶ್ರಮೆಯ ಉದ್ದೇಶ ವನ್ನು ಅವರಿಗೆ ಹೇಳುವದನ್ನು ಆಯ್ದುಕೊಂಡನು. ಆ ಮನುಷ್ಯನು ಕುರುಡನಾಗಿ ಯಾಕೆ ಹುಟ್ಟಿದನು ಎಂಬುದನ್ನು ಆತನು ಶಿಷ್ಯರಿಗೆ ಹೇಳದಿದ್ದರೂ, ಕುರುಡು ಮನುಷ್ಯನ ಜೀವನದ ಉದ್ದೇಶವನ್ನು ಆತನು ಅವರಿಗೆ ಹೇಳಿದನು: "ದೇವರ ಕ್ರಿಯೆಗಳು ಇವನಲ್ಲಿ ತೋರಿಬರುವದಕ್ಕೆ ಇದಾಯಿತು."

ಈ ವಿಷಯದ ಮೇಲೆ ಯೇಸುವಿನ ಮಾತುಗಳು ಜೀವಿತದಲ್ಲಿ ನಮ್ಮ ಪ್ರಾಧಾನ್ಯತೆಗಳನ್ನು ಇಟ್ಟುಕೊಳ್ಳುವ ವಿಧಾನದೊಂದಿಗೆ ಅಡ್ಡ ಬರುತ್ತದೆ. ಅಮೇರಿಕ್ಕನ್ನರು ತಮ್ಮ ಘಟನೆಯಲ್ಲಿ ಅವರಿಗೆ "ಜೀವಿಸಲಿಕ್ಕೆ, ಸ್ವಾತಂತ್ರ್ಯಕ್ಕೆ ಮತ್ತು ಸುಖವನ್ನು ಹುಡುಕುವದಕ್ಕೆ" ಹಕ್ಕು ಇದೆಯೆಂದು ಹೇಳಲ್ಪಟ್ಟಿದೆ. ಬಹಳ ಸಲ, ಜನರು ಜೀವನದ ಉದ್ದೇಶವು ವೈಯಕ್ತಿಕ ಸುಖವನ್ನು ಸಾಧಿಸಿಕೊಳ್ಳುವುದು ಎಂದರ್ಥ ಎಂದು ತಪ್ಪಾಗಿ ಅರ್ಥಮಾಡಿಕೊಂಡಿದ್ದಾರೆ. ನಾವು ಅಂಥ ದೃಷ್ಟಿಕೋನವನ್ನು ತೆಗೆದು ಕೊಳ್ಳುವಾಗ, ಎಲ್ಲಾ ಶ್ರಮೆಯು ನಮ್ಮ ಸುಖಕ್ಕೆ ಆತಂಕಕರವಾ ದದ್ದಾಗುತ್ತದೆ, ಹೀಗೆ ಅದು ಭಯಂಕರವಾದ ಸಂಗತಿ ಆಗುತ್ತದೆ. ಹೀಗಿದ್ದರೂ, "ದೇವರ ಕಾರ್ಯಗಳನ್ನು ಪ್ರದರ್ಶಿಸುವಂತೆ" ಜೀವನದ ಉದ್ದೇಶವನ್ನು ನಾವು ದೃಷ್ಟಿಸಿದರೆ, ಆಗ ನಾವು ನಮ್ಮ ಆಶೀರ್ವಾದಗಳನ್ನು ನೋಡುವ ರೀತಿಯಲ್ಲಿಯೇ ನಮ್ಮ ಶ್ರಮೆಗಳನ್ನು ನೋಡುವೆವು; ದೇವರನ್ನು ಮಹಿಮೆಪಡಿಸುವ ಮಾರ್ಗದಂತೆ ನೋಡುವೆವು. ಅದು ತನ್ನ ಶಿಷ್ಯರಿಗೆ ಯೇಸುವಿನ ಸಂದೇಶವಾಗಿತ್ತು. ಕುರುಡು ಮನುಷ್ಯನು ಯಾಕೆ ಕುರುಡನಾಗಿ ಹುಟ್ಟಿದನೆಂಬುದನ್ನು ಆತನು ಅವರಿಗೆ ಹೇಳಲಿಲ್ಲ, ಕುರುಡು ಮನುಷ್ಯನ ಜೀವನದ ಉದ್ದೇಶವನ್ನು ಆತನು ಅವರಿಗೆ ಹೇಳಿ ದನು: ದೇವರನ್ನು ಮಹಿಮೆ ಪಡಿಸುವುದು!

ಶ್ರಮೆಯಲ್ಲಿ "ದೇವರ ಕಾರ್ಯಗಳನ್ನು ಪ್ರದರ್ಶಿಸಿದವರ" ಬಗ್ಗೆ ನಾನು ಯೋಚಿಸು ವಾಗ, ಅನೇಕ ಜನರು ನನ್ನ ಮನಸ್ಸಿಗೆ ಬರುವರು. ಒಬ್ಬನು ಮಾನಸಿಕವಾಗಿ ಮಿತಿಯುಳ್ಳ ಸಾಮರ್ಥ್ಯವಿದ್ದ ಯುವಕನು, ಅವನ ತಾಯಿ ಮತ್ತು ತಂದೆಯು ಅನೇಕ ಸಲ ತಮ್ಮ ಮಗನು ಆ ರೀತಿಯಲ್ಲಿ ಹುಟ್ಟುವದಕ್ಕೆ ಕಾರಣವೇನೆಂದು ತಮ್ಮಷ್ಟಕ್ಕೆ ತಾವು ಮತ್ತು ದೇವರಿಗೆ ಕೇಳಿರ ಬಹುದೆಂದು ನನಗೆ ನಿಶ್ಚಯವಿದೆ. ಒಂದು ಪ್ರಸಂಗದ ಅಂತ್ಯದಲ್ಲಿ ಅವನು ಆಮಂತ್ರಣಕ್ಕೆ ಓಗೊಟ್ಟಾಗ, ಅವರ ಮಗನ ಬಾಪ್ತಿಸ್ಮದ ರಾತ್ರಿಯನ್ನು ನಾನು ಜ್ಞಾಪಿಸಿಕೊಳ್ಳುತ್ತೇನೆ. ಸುಂದರ ವಾದ ಸರಳತೆಯೊಂದಿಗೆ, "ನಾನು ಏನು ಮಾಡಬೇಕೆಂದು ದೇವರು ಬಯಸುವನೋ ಅದನ್ನೆ ನಾನು ಮಾಡುತ್ತೇನೆ" ಎಂದು ಹೇಳಿದಾಗ ಮತ್ತು ಯೇಸುವಿನಲ್ಲಿ ಅವನು ತನ್ನ ವಿಶ್ವಾಸವನ್ನು ಅರಿಕೆಮಾಡಿದಾಗ, ಸಭಿಕರಲ್ಲಿ ಕಣ್ಣೀರು ಇಲ್ಲದವರಾರೂ ಅಲ್ಲಿರಲಿಲ್ಲ. ಆ ಸಮಯದಲ್ಲಿ ದೇವರ ಕಾರ್ಯವು ಆ ಯುವಕನ ಜೀವನದಲ್ಲಿ ಪ್ರದರ್ಶಿಸಲ್ಪಟ್ಟಿತು.

ಒಬ್ಬ ಪ್ರಸಂಗಿಯ ಬಗ್ಗೆ ನನಗೆ ಜ್ಞಾಪಕಕ್ಕೆ ಬರುತ್ತದೆ. ಅವನು ತನಗೆ ಮರಣಾಂತಿಕ ವಾದ ರೋಗವು ಬಂದಿದೆಯೆಂದು ಹೇಳಲ್ಪಟ್ಟ ಕೂಡಲೇ ಅವನ ಬಗ್ಗೆ ನನಗೆ ತಿಳಿದು ಬಂದಿತು. ಅವನು ತನ್ನ ಪ್ರಾರ್ಥನೆಯು ದೇವರಿಗೆ ತನ್ನನ್ನು ಚೆನ್ನಾಗಿ ಮಾಡಬೇಕೆಂಬುದಾಗಿತ್ತೆಂದು ಸಭೆಗೆ ಹೇಳಿದನು; ಆದರೆ ಅವನು ವಾಸಿಯಾಗದಿದ್ದರೆ, ಅವನ ಪ್ರಾರ್ಥನೆಯು ಸಾಯುವುದು ಹೇಗೆ ಎಂಬುದನ್ನು ಸಭೆಗೆ ತೋರಿಸಲು ದೇವರು ತನಗೆ ಸಹಾಯ ಮಾಡಬೇಕು ಎಂದಾಗಿರುತ್ತದೆ. ಕೆಲವು ತಿಂಗಳುಗಳ ನಂತರ ಅವನು ಅದನ್ನೆ ಮಾಡಿದನು; ಅವನು ಸಾಯುವದರಲ್ಲಿ ದೇವರ ಕಾರ್ಯವು ಪ್ರದರ್ಶಿಸಲ್ಪಟ್ಟಿತು!

ಶ್ರಮೆಪಡುವಲ್ಲಿ ದೇವರ ಕಾರ್ಯವನ್ನು ಪ್ರದರ್ಶಿಸಿದವರಲ್ಲಿ ಇನ್ನೊಂದು ಉದಾಹರಣೆಯು ವರ್ಷಗಳ ಕ್ಯಾನ್ಸರಿನಿಂದ ಬಳಲಿ ಇತ್ತೀಚೆಗೆ ಕರ್ತನೊಂದಿಗಿರಲು ಹೋದ ಒಬ್ಬ ಮಹಿಳೆ ಯದಾಗಿರುತ್ತದೆ. "ಯಾಕೆ?" ಎಂದು ಜನರು ಪ್ರಶ್ನಿಸುವಂಥದ್ದನ್ನು ಅನೇಕ ಸಲ ನಾನು ಕೇಳಿಸಿಕೊಂಡಿದ್ದೇನೆ. ಆಕೆಯ ಅಸ್ವಸ್ಥತೆಯ ದಿನಗಳನ್ನು ಹಿಂದಿರುಗಿ ನೋಡಿದಾಗ ಕೆಲವೇ ಜನರು ತಮ್ಮ ಉತ್ತಮ ಆರೋಗ್ಯದಲ್ಲಿ ಮಾಡುವ ರೀತಿಯಲ್ಲಿ ಆಕೆಯು ತನ್ನ ಅಸ್ವಸ್ಥತೆಯಲ್ಲಿ ದೇವರ ಕಾರ್ಯವನ್ನು ಪ್ರದರ್ಶಿಸಿದಳೆಂದು ನನಗೆ ದೃಢ ನಂಬಿಕೆಯಿದೆ.

ಉದ್ದೇಶದೊಂದಿಗೆ ಜೀವಿಸುವ ಒಂದು ಅಂತಿಮ ಉದಾಹರಣೆಯು ಶಿಲುಬೆಯ ಮೇಲಿನ ಯೇಸುವಾಗಿದ್ದಾನೆ. ಅದು ಅನ್ಯಾಯವಾದದ್ದು ಮತ್ತು ಕ್ರೂರಾವದದ್ದು ಆಗಿತ್ತು. ಅದು, ಅನೇಕ ವಿಧಗಳಲ್ಲಿ, ಒಂದು ದುಃಖದ ಸಂಗತಿಯಾಗಿದೆ; ಆದಾಗ್ಯೂ ಯೇಸುವು ತನ್ನ ಜೀವಿ ತದಲ್ಲಿ ಮತ್ತು ಮರಣದಲ್ಲಿ "ದೇವರ ಕಾರ್ಯಗಳು ಪ್ರದರ್ಶಿಸಲ್ಪಡಲಿಕ್ಕಾಗುವಂತೆ" ಶಿಲುಬೆಯ ಮೇಲೆ ನೇತಾಡಿದನು. ಯೇಸುವು ಶಿಲುಬೆಯ ಮೇಲೆ ಯಾಕೆ ಶ್ರಮೆತಾಳ ಬೇಕಾಗಿತ್ತು ಎಂಬುದನ್ನು ವಿವರಿಸಬಲ್ಲ ಯಾರನ್ನೂ ನಾನು ಸಂದರ್ಶಿಸಿರುವದಿಲ್ಲ. ನಾವು ಪರಲೋಕವನ್ನು ತಲುಪುವವರೆಗೆ ಸಂಪೂರ್ಣವಾಗಿ ಅರ್ಥಮಾಡಿ ಕೊಳ್ಳುವೆವೆಂದು ನಾನು ನಂಬುವದಿಲ್ಲ. ಯೇಸುವು ಶಿಲುಬೆಗೆ ಹೋಗಿದ್ದರ ಕಾರಣದಿಂದ ಒಂದು ಆಶ್ಚರ್ಯಕರವಾದ ರೀತಿಯಲ್ಲಿ ದೇವರ ಕಾರ್ಯವು ಪ್ರದರ್ಶಿಸಲ್ಪಟ್ಟಿತು ಎಂಬ ಸಂಗತಿಯನ್ನು ಒಂದು ಚಿಕ್ಕ ಮಗುವೂ ಸಹ ಮೆಚ್ಚಿಕೊಳ್ಳುತ್ತದೆ. ಆತನು ದೇವರ ಉದ್ದೇಶಗಳಿಗಾಗಿ ಜೀವಿಸಿದನು ಮತ್ತು ಮರಣ ಹೊಂದಿದನು.

ದೇವರು ನಮ್ಮ ಕಡೆಗೆ ಬೆನ್ನು ಹಾಕಿದ್ದಾನೆ ಮತ್ತು ನಾವು ದೇವರ ಮಹಿಮೆಗಾಗಿ ಉಪಯೋಗಿಸಲ್ಪಡುವ ಸಾಧ್ಯತೆ ಇರುವದಿಲ್ಲ ಎಂದು ನಂಬಲಿಕ್ಕೆ ನಮಗೆ ಕಾರಣವಾ ಗುವಂಥ ಯಾವುದನ್ನಾದರೂ ನಾವೆಲ್ಲರೂ ಎದುರಿಸುತ್ತೇವೆ. ಕೆಲವರು "ಆದರೆ ನಾನು ವಿವಾ ಹ ವಿಚ್ಛೇದನ ಹೊಂದಿದ್ದೇನೆ," "ನಾನು ನನ್ನ ವಿವಾಹದಲ್ಲಿ ಹೋರಾಡುತ್ತಿದ್ದೇನೆ," "ನನಗೆ ನನ್ನ ಮಕ್ಕಳೊಂದಿಗೆ ಸಮಸ್ಯೆಗಳಿವೆ," "ನಾನು ಅಸ್ವಸ್ಥನಾಗಿದ್ದೇನೆ," ಇಲ್ಲವೇ "ನಾನು ಬಹಳ ವಯಸ್ಸಿನವನಾಗಿದ್ದೇನೆ/ಯುವಕನಾಗಿದ್ದೇನೆ" ಎಂದು ಹೇಳಬಹುದು. ಯೇಸುವು ನಮ್ಮ ಜಗತ್ತಿನೊಳಗೆ ನಡೆಯುತ್ತ, ತಿರುಳಿನಲ್ಲಿ, ಹೀಗೆ ಹೇಳುತ್ತಾನೆ: "ಈಗ ನೀನು ಎದುರಿಸುತ್ತಿರುವ ತೊಂದರೆಗಳನ್ನು ನೀನು ಯಾಕೆ ಎದುರಿಸುತ್ತಿರುವಿ ಎಂದು ನಾನು ಹೇಳುವದಿಲ್ಲ, ಆದರೆ ನಾನು ನಿನಗೆ ಇದನ್ನು ಹೇಳುತ್ತೇನೆ. ನಿನ್ನ ಸಮಸ್ಯೆಗಳಿದ್ದರೂ - ಬಹುಶಃ ನಿನ್ನ ಸಮಸ್ಯೆಗಳ ಕಾರಣದಿಂದಲೂ ಸಹ, ದೇವರ ಕಾರ್ಯವು ನಿನ್ನ ಜೀವಿ ತದಲ್ಲಿ ಪ್ರದರ್ಶಿಸಲ್ಪಡುವುದು!"

ಇದರ ಉದಾಹರಣೆಯು ಪೌಲನು, ಅವನು ತನ್ನ ಪರಿಚಿತವಾದ "ಶರೀರದಲ್ಲಿ ನಾಟಿದ ಶೂಲದಿಂದ" ಪೀಡಿಸಲ್ಪಟ್ಟನು (2 ಕೊರಿಂಥ 12:7). ಅದನ್ನು ತೆಗೆದು ಹಾಕ ಬೇಕೆಂದು ಮೂರು ಸಲ ಕರ್ತನನ್ನು ಬೇಡಿಕೊಂಡನು. ಈ ಪೀಡೆಯಿಂದ ತಾನು ಸ್ವತಂತ್ರನಾಗಿದ್ದರೆ ದೇವರಿಗಾಗಿ ಇನ್ನೂ ಎಷ್ಟೋ ಹೆಚ್ಚಾಗಿ ಸಾಧಿಸಬಹುದೆಂದು ಪೌಲನು ಕಲ್ಪಿಸಿಕೊಂಡನೆಂದು ನನಗೆ ನಿಶ್ಚಿತತೆಯಿದೆ, ಆದಾಗ್ಯೂ ಕರ್ತನು ಪೌಲನ ಶರೀರದಲ್ಲಿಯ ಶೂಲವನ್ನು ತೆಗೆದು ಹಾಕುವದನ್ನು ನಿರಾಕರಿಸಿದನು. ಅದರ ಬದಲು, ದೇವರು ಅವನನ್ನು ಈ ಸಂದೇಶದೊಂದಿಗೆ ಬಿಟ್ಟನು: "ನನ್ನ ಕೃಪೆಯೇ ನಿನಗೆ ಸಾಕು; ಬಲಹೀನತೆಯಲ್ಲಿಯೇ ಬಲವು ಪೂರ್ಣ ಸಾಧಕವಾಗುತ್ತದೆ" (2 ಕೊರಿಂಥ 12:9). ಬಲ ಮತ್ತು ಆರೋಗ್ಯಕ್ಕಿಂತ ಬಲಹೀನತೆಯ ಮುಖಾಂತರ ದೇವರ ಬಲವನ್ನು ತಾನು ಚೆನ್ನಾಗಿ ಪ್ರದರ್ಶಿಸಬಹುದೆಂಬ ತೀರ್ಮಾನವನ್ನು ಪೌಲನು ಅಂತಿಮವಾಗಿ ಸ್ವೀಕರಿಸಿದನು. ಇದರಲ್ಲಿ ಪೌಲನು ಬಾಧೆಗಳನ್ನು ಎದುರಿಸುವಲ್ಲಿ ಅನುಸರಿಸಬೇಕಾದ ಒಂದು ಮಾದರಿಯನ್ನು ನಮಗೆ ಕೊಟ್ಟಿರುವನು, ಮೊದಲು, ನಮ್ಮ ನೋವಿನಿಂದ ನಮ್ಮನ್ನು ಬಿಡುಗಡೆ ಮಾಡಲು ನಾವು ದೇವರನ್ನು ಕೇಳಕೊಳ್ಳಬೇಕು. ಇದು ನೋವಿನ ನಮ್ಮ ಸ್ವಾಭಾವಿಕವಾದ ಮಾನವ ಪ್ರತಿಕ್ರಿಯೆಯಾಗಿದೆ. ಮತ್ತು ವಿಮೋಚನೆಗಾಗಿ

ಕೂಗುವುದು ಸರಿಯಾದದ್ದಾಗಿದೆ. ಕ್ರೈಸ್ತರಿಗೆ ಎರಡನೆಯ ಹೆಜ್ಜೆಯು, ಹೀಗಿದ್ದರೂ, "ಏನೇ ಬರಲಿ, ನನ್ನ ಜೀವಿತದಲ್ಲಿ ನೀನು ಮಹಿಮೆ ಹೊಂದಬೇಕು" ಎಂದು ದೇವರಿಗೆ ಹೇಳು ವುದಾಗಿದೆ. ನಮ್ಮ ಪರಿಸ್ಥಿತಿಗಳು ಏನೇ ಆಗಿದ್ದರೂ, ದೇವರ ಕಾರ್ಯವನ್ನು ಪ್ರದರ್ಶಿಸಲು ನಾವೆಲ್ಲರೂ ಉಪಯೋಗಿಸಲ್ಪಡುವೆವು!

ಕ್ಯಾನ್ಸರಿಗೆ ವಿರುದ್ಧವಾಗಿ ಹೋರಾಟದ ನಂತರ ಮತ್ತು ಬೇಸಬಾಲಿನಲ್ಲಿ ನಾಟಕೀಯವಾಗಿ ಹಿಂದಿರುಗಿದ ನಂತರ, ಡೇವ್ ಡ್ರಾವೆಕ್ಕಿ ಎಂಬುವನು ಒಂದು ಗಾಯದಿಂದ ಶ್ರಮೆಹೊಂದಿದನು. ಇದು ಸ್ಯಾನ ಫ್ರಾನ್ಸಿಸ್ಕೋ ಜಯಂಟ್ಸ ಬೇಸ್ ಬಾಲ್ ಟೀಮಿಗಾಗಿ ಒಬ್ಬ ಸ್ಟಾರ್ ಪಿಟ್ಚರ್‌ನಂತೆ ಅವನ ಕೆಲಸವನ್ನು ಅಂತ್ಯಗೊಳಿಸಿತು. ಅನಂತರದಲ್ಲಿ ಅವನು ಹೀಗೆ ಬರೆದನು,

> ದುರ್ಘಟನೆಯು ಒಂದು - ಮಾರ್ಗದ ಬಾಗಿಲಿನ ಮುಖಾಂತರ ದೊಡುತ್ತದೆ. ಮತ್ತು ಒಮ್ಮೆ ನಾವು ಅದನ್ನು ದಾಟಿ ಹೋದರೆ, ಆ ದುರ್ಘಟನೆಯ ಮೊದಲಿದ್ದ ಜೀವನದ ಮಾರ್ಗಕ್ಕೆ ನಾವೆಂದೂ ಹಿಂದಿರುಗುವದಿಲ್ಲ ... ಹಾಗೆ ಮಾಡಲು ನಾವು ಎಷ್ಟು ನೊಂದುಕೊಂಡರೂ, ನಾವು ಹಿಂದಿರುಗಿ ಹೋಗಲಾರೆವು. ಒಮ್ಮೆ ಏನಾಗಿತ್ತೋ ಅದಕ್ಕಾಗಿ, ಅಲ್ಲಿದ್ದ ಒಳ್ಳೆಯದಕ್ಕಾಗಿ, ನಮಗಿದ್ದ ಸಂತೋಷಕರವಾದ ಸಮಯಗಳಿಗಾಗಿ, ನಗುವಿಕೆಗಾಗಿ, ಪ್ರೀತಿಗಾಗಿ, ಹಂಚಿಕೊಂಡ ಸ್ಮರಣೆಗಳಿಗಾಗಿ ನಾವು ಕೃತಜ್ಞತೆಸಲ್ಲಿಸುವದನ್ನೆಷ್ಟೇ ಮಾಡಬಲ್ಲೆವು. ಆಗ, ಆ ಸಮಯಗಳಿಗಾಗಿ ಮತ್ತು ನಮ್ಮನ್ನು ಪ್ರೀತಿಸಿದವರಿಗೆ ವಿಯೋಗ ವಂದನೆ ಹೇಳಿ, ಸೂರ್ಯ, ಚಂದ್ರ ಮತ್ತು ನಕ್ಷತ್ರಗಳಿಗೆ ಮಾರ್ಗಕೊಟ್ಟಾತನ ಹಸ್ತದಲ್ಲಿ ನಮ್ಮ ಹಸ್ತವನ್ನಿಟ್ಟು, ನಮ್ಮ ಜೀವಿ ತಗಳಿಗಾಗಿಯೂ ಸಹ ಆತನಲ್ಲಿ ಒಂದು ಮಾರ್ಗವಿರುವದೆಂದು ನಂಬಬೇಕು.[2]

## ಮುಕ್ತಾಯ

"ಜೀವನಕ್ಕೆ ಅರ್ಥವಿದೆಯೋ, ಇಲ್ಲವೇ ಅದು ಅನಿರೀಕ್ಷಿತ ಘಟನೆಯ ಕೇವಲ ಆಟವಾ ಗಿದೆಯೋ?" ಎಂಬ ಪ್ರಶ್ನೆಯು ಜಗತ್ತಿನಲ್ಲಿ ಉಳಿದು ಕೊಳ್ಳುತ್ತದೆ: ಆ ಪ್ರಶ್ನೆಗೆ ಜಗತ್ತಿಗೆ ಒಂದು ಉತ್ತರವಿರಲಿಕ್ಕಿಲ್ಲ, ಆದರೆ ಯೇಸುವಿನ ಹಿಂಬಾಲಕರಿಗೆ ಇರುವುದು. ಈ ಜಗತ್ತಿನಲ್ಲಿ ನಮಗೆ ಏನು ಸಂಭವಿಸಿದರೂ ಅದರೊಳಗೆ ದೇವರ ಮಹಿಮೆಗಾಗಿ ಉಪಯೋಗಿಸಲ್ಪಡುವ ಸಾಧ್ಯತೆಯನ್ನು ಅದು ಹಿಡಿದು ಕೊಂಡಿರುವದೆಂದು ನಾವು ಬಲ್ಲೆವು. ನಮ್ಮ ಪರಿಸ್ಥಿತಿಗಳು ಯಾವದೇ ಆಗಿದ್ದರೂ, ನಮ್ಮಲ್ಲಿ "ದೇವರ ಕಾರ್ಯಗಳು ಪ್ರದರ್ಶಿಸಲ್ಪಡಲಿಕ್ಕಾಗುವಂತೆ" ನಾವು ಜೀವಿಸೋಣ!

---

ಟಿಪ್ಪಣೆಗಳು

[1]Leon Morris, *The Gospel According to John,* The New International Commentary on the New Testament (Grand Rapids, Mich.: Wm. B. Eerdmans Publishing Co., 1971), 478. [2]Dave Dravecky, *When You Can't Come Back* (Grand Rapids, Mich.: Zondervan, 1992), 159.